ಬದಲಾಯಿಸಿ ಮತ್ತೊಂದು ಯೋಜನೆಯನ್ನು ಮಾಡುತ್ತಿದ್ದಾರೆ. ಭೀಮಾ ನದಿಯಿಂದ ನೀರನ್ನು ಒದಗಿಸುವ ಯೋಜನೆಯನ್ನು ಮಾಡುತ್ತೀರಾ ಅಥವಾ ಬೆಣ್ಣೆತೊರೆ ಯೋಜನೆಯನ್ನೇ ಮುಂದುವರಿಸುತ್ತೀರಾ ? ಈವರೆಗೆ ಖರ್ಚು ಮಾಡಿರತಕ್ಕ ಹಣ ಏನಾಯಿತು ?

ಅಧ್ಯಕ್ಷರು.—ಮಾನ್ಯ ಕಾಂತಾರವರೇ, ನೀವು ಭಾಷಣ ಮಾಡುತ್ತಿದ್ದೀರಿ, ದಯವಿಟ್ಟು ಪ್ರಶ್ನೆ ಕೇಳಿ. ಪಾಯಿಂಟ್ಸ್ ಮಾತ್ರ ಕೇಳಬೇಕು.

ಶ್ರೀ ಎಸ್. ಕೆ. ಕಾಂತಾ.—ಅಧ್ಯಕ್ಷರೇ ಇವತ್ತಿನ ಪರಿಸ್ಥಿತಿ ಹಾಗೆ ಇದೆ. ೧೯೫೮ರ ಒಳಗಾಗಿ ಗುಲಬರ್ಗಾ ನಗರಕ್ಕೆ ನೀರು ಸರಬರಾಜು ಮಾಡುವಂತಹ ಶಾಶ್ವತ ಕಾರ್ಯಕ್ರಮ ಹಾಕಿಕೊಳ್ಳತಕ್ಕದ್ದು.....

ಅಧ್ಯಕ್ಷರು.—ತಾವು ಭಾಷಣ ಮಾಡುವುದಕ್ಕೆ ಶುರುಮಾಡಿದ್ದೀರೋ ಪ್ರಶ್ನೆ ಕೇಳುತ್ತಿದ್ದೀರೋ

ಶ್ರೀ ಎಸ್. ಕೆ. ಕಾಂತಾ.—ಶಾಶ್ವತ ಯೋಜನೆಯನ್ನು ಹಾಕಿಕೊಳ್ಳುವ ವಿಚಾರವನ್ನು ಮೊದಲಿನಿಂದಲೂ ಹೇಳುತ್ತಿದ್ದಾರೆ. ಅಧ್ಯಕ್ಷರೇ, ಭೀಮಾನದಿ ನೀರು ಸರಾಬರಾಜು ಯೋಜನೆ ಬಗ್ಗೆ ಖಚಿತವಾಗಿ ಹೇಳಬೇಕು. ಪರಿಶೀಲಿಸಲಾಗುವುದು ಎಂದು ಹೇಳಿ ಅದರಲ್ಲಿಯೇ ಒಂದೆರಡು ವರ್ಷ ಹೋದರೆ, ಜನ ಕಷ್ಟಕ್ಕೀಡಾಗುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಸನ್ಮಾನ್ಯ ಸದಸ್ಯರು ಗುಲಬರ್ಗಾ ನಗರದ ನೀರಿನ ಸಮಸ್ಯೆಯ ಬಗ್ಗೆ ಹೇಳಿದ್ದಾರೆ ನಿಜ. ಅಲ್ಲಿ ಸಮಸ್ಯೆ ಇದೆ. ನೀರಿನ ಸಮಸ್ಯೆ ಬಗೆಹರಿಯುವುದಕ್ಕೆ ಕೊಳವೆ ಬಾವಿಗಳನ್ನು ತೆಗೆದು ಅದಕ್ಕೆ ಸಾಕಷ್ಟು ಹಣವನ್ನೂ ಸಹ ಹೋದ ವರ್ಷ ಬಿಡುಗಡೆ ಮಾಡಿದ್ದೇವೆ ಎಂಬ ವಿಚಾರ ಕೂಡಾ ಸನ್ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಈ ಒಂದು ಯೋಜನೆಯಿಂದ ಹೆಚ್ಚು ನೀರು ಸಿಗತಕ್ಕಂಥ ಸಂಭವ ಇದೆ ಎನ್ನತಕ್ಕಂಥ ಒಂದು ಸೂಚನೆ ಬಂದಿದೆ. ಸರಕಾರ ಇದನ್ನು ಪರಿಶೀಲನೆ ಮಾಡುತ್ತದೆ ಎಂಬ ಮಾತನ್ನೂ ಹೇಳಿದ್ದೇನೆ. ಖಚಿತವಾಗಿ ಯಾವಾಗ ಮಾಡುತ್ತೀರಿ ಹೇಳಿ ಎಂದು ಹೇಳಿದರೆ, ಹಣದ ಯೋಚನೆ ಮಾಡಬೇಕಾಗುತ್ತದೆ, ತಾಂತ್ರಿಕ ಪರಿಶೀಲನೆ ಮಾಡಬೇಕಾಗುತ್ತದೆ, ಇವುಗಳನ್ನೆಲ್ಲಾ ಯೋಚನೆ ಮಾಡಿ ನೀರು ಒದಗಿಸಲಿಕ್ಕೆ ಪ್ರಯತ್ನ, ಆದರೆಷ್ಟು ಬೇಗ ಮಾಡಬೇಕೆಂದು ಬತ್ತಾಯ ಮಾಡುತ್ತಿದ್ದಾರೋ ಅಷ್ಟೆ ಒಂದು ತೀಕ್ಷ್ಣತೆಯಿಂದ ಮಾಡುವುದಕ್ಕೆ ನಾವು ಉದ್ದೇಶ ಇಟ್ಟುಕೊಂಡಿದ್ದೇವೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೈಸೂರು ನಗರದಲ್ಲಿರುವ ರೆವಿನ್ಯೂ ಬಡಾವಣೆಗಳನ್ನು ಕ್ರಮಗೊಳಿಸುವ ಬಗ್ಗೆ

೧೬೬ (೧೩೫) ಶ್ರೀಮತಿ ಮುಕ್ತರ್ ಉನ್ನೀಸಾ ಬೇಗಂ.(ನರಸಿಂಹರಾಜ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮೈಸೂರಿನ ೨೪ ರೆವಿನ್ಯೂ ಬಡಾವಣೆಗಳಿಗೆ ಸರ್ಕಾರದವರು ಕ್ರಮಗೊಳಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಆ) ಹಾಗಿಲ್ಲದಿದ್ದಲ್ಲಿ, ಯಾವಾಗ ಕ್ರಮಗೊಳಿಸಲಾಗುತ್ತದೆ ?

ಪ್ರೊ।। ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು, ಸಂಸದೀಯ ಆಹಾರ ಮಂತ್ರಿಗಳು).—

ಅ) ಮೈಸೂರಿನ ಅನಧಿಕೃತ ನಿರ್ಮಾಣದ ಬಡಾವಣೆಗಳಿಗೆ ಸಮಿತಿಯನ್ನು ರಚನೆ ಮಾಡಲು ಸರ್ಕಾರವು ಒಂದು ಮಾರ್ಗದರ್ಶನವನ್ನು ಹೊರಡಿಸಲಾಗಿದೆ. ಎನ್ಯೂಮರೇಷನ್ ಕೆಲಸವು ಮುಗಿದಿರುತ್ತದೆ. ಅನಧಿಕೃತ ನಿರ್ಮಾಣದ ಬಗ್ಗೆ ಸದ್ಯದಲ್ಲಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಆ) ೩೧-೩-೧೯೮೭ ರೊಳಗೆ ಅನಧಿಕೃತ ನಿರ್ಮಾಣದ ಬಗ್ಗೆ ಸೂಕ್ತ ಕ್ರಮದ ಬಗ್ಗೆ ನಿರೀಕ್ಷಿತ ವಾಗಿದೆ.

ಶ್ರೀಮತಿ ಮುಕ್ತರುನ್ನೀಸಾ.—ಸನ್ಮಾನ್ಯ ಅಧ್ಯಕ್ಷರೇ ನನ್ನ ಒಂದನೇ ಪ್ರಶ್ನೆಗೆ ಉತ್ತರದಲ್ಲಿ "enumeration work has been completed" ಎಂದು ಇದೆ. Before the enumeration work started they would have conducted the

Committee meeting and took member's suggestions. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಅಪ್ಲಿಕೇಷನ್ ಫಾರಮ್‌ನಲ್ಲಿ ಸೀರಿಯಲ್ ನಂಬರ್ ಇಲ್ಲ, ರೆವಿನ್ಯೂ ಡಿಪಾರ್ಟ್‌ಮೆಂಟ್ ಸೀಲ್ ಇಲ್ಲ, ಮತ್ತು ಕನ್‌ಸರ್ನ್ಡ್ ಪರ್ಸನ್ ಸಿಗ್ನೇಚರ್ ಇಲ್ಲ. When our Hon. Chief Minister visited Mysore, this was brought to his notice also. He also replied that it was wrong. ಆದರೆ ಅದು ಕೆಲಸ ಆಗಲಿಲ್ಲ. ಮತ್ತೆ ಏನಾಗಿದೆ ಎಂದರೆ.....the enumeration work is not completed.

ಅಧ್ಯಕ್ಷರು.—ನಿಮಗೆ ಏನಾಗಬೇಕು ಅದನ್ನು ಹೇಳಿ ?

ಶ್ರೀಮತಿ ಮುಬ್ತಾರುನ್ನೀಸಾ.—ಅದೇ ಕೇಳುತ್ತಿದ್ದೇನೆ. ನಮಗೆ ಏನಾಗಬೇಕೆಂದು ಕೇಳುತ್ತಿದ್ದೇನೆ, ನಾನೂ ಕೂಡಾ ಅದಕ್ಕೆ ಮೆಂಬರ್ ಇದ್ದೇನೆ, ನಮ್ಮ ಮಿತ್ರರಾದ ಹೆಮ್ಮಿಗೆಯವರೂ ಮೆಂಬರ್ ಆಗಿದ್ದಾರೆ. ಇಲ್ಲಿ ಎನ್ಯುಮರೇಷನ್ ವರ್ಕ್ ಕಂಪ್ಲೀಟೆಡ್ ಎಂದು ಇದೆ, ಆದರೆ ಇದುವರೆಗೆ ಒಂದು ಮಿಟಿಂಗ್ ಆಗಲಿಲ್ಲ. ಇದು ೧೨ ವರ್ಷದಿಂದಲೂ ಆನ್ ಆಥರೈಸ್ಡ್ ಲೇಔಟ್ ಎಂದು ಇದೆ. ನನ್ನ ಎರಡನೆಯ ಪ್ರಶ್ನೆಗೆ ಏನು ಹೇಳಿದ್ದಾರೆ ಎಂದರೆ the layout is expected to be completed by 31-3-87. ಈ ವರ್ಕ್ ಕೂಡಾ ಕಂಪ್ಲೀಟ್ ಆಗಲಿಲ್ಲ. ಮೊನ್ನೆ ನಮ್ಮ ಮಂತ್ರಿಯವರು ಆ ಜನರಿಗೆ ಕಾಂಪನ್‌ಸೇಷನ್ ಕೊಡುವುದಿಲ್ಲ, ಬೇರೆ ಜಾಗ ಕೊಡೋಣ, ಜನಶ್ರೀ ನಗರ ಮತ್ತು ಕುವೆಂಪು ನಗರದವರಿಗೆ ರೆಗ್ಯುಲರೈಸ್ ಮಾಡುತ್ತೇನೆಂದು ಹೇಳಿದ್ದಾರೆ. ಇದು ನನಗೆ ಗೊತ್ತಿಲ್ಲ ಅದಕ್ಕೋಸ್ಕರ ಕೇಳುತ್ತಿದ್ದೇನೆ. ಆ ಲೇಔಟ್‌ನಲ್ಲಿ ಬಹಳ ತೊಂದರೆ ಇದೆ, ಅಲ್ಲಿ ಎಲೆಕ್ಟ್ರಿಸಿಟಿ ಇಲ್ಲ, ವಾಟರ್ ಇಲ್ಲ, ಕೇಳಿದರೆ ಲೇಔಟ್ ಕಾರ್ಪೊರೇಷನ್‌ಗೆ ಸೇರಿಲ್ಲ, ಆದುದರಿಂದ ಎಲೆಕ್ಟ್ರಿಸಿಟಿ, ವಾಟರ್ ಕೊಡುವುದಿಲ್ಲ ಎಂದು ಹೇಳಿದ್ದಾರೆ, ಬಹಳ ತೊಂದರೆ ಇದೆ ಸ್ವಾಮಿ, ಅದಕ್ಕೋಸ್ಕರ ಕೇಳುತ್ತಿದ್ದೇನೆ.

ಶ್ರೀ ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಈ ಕೆಲಸ ಮಾಡುವುದಕ್ಕೆ ಒಂದು ಸಮಿತಿಯನ್ನು ಸರಕಾರ ನೇಮಕ ಮಾಡಿದೆ, ಆ ಸಮಿತಿಯಲ್ಲಿ ಸನ್ಮಾನ್ಯ ಸದಸ್ಯರೂ ಇದ್ದಾರೆ.....

ಅಧ್ಯಕ್ಷರು.—ಅವರು ಮಿಟಿಂಗೇ ಕರೆದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಿಟಿಂಗ್ ಕರೆದು ಅವರಿಗೆ ವಿವರ ಕೊಡುವಂತೆ ಹೇಳುತ್ತೇನೆ.

ಶ್ರೀಮತಿ ಮುಬ್ತಾರುನ್ನೀಸಾ.—ಈ ಫಾರಂನಲ್ಲಿ ಸೀಲ್ ಇಲ್ಲ, ಸೈನ್ ಇಲ್ಲ, ಸೀರಿಯಲ್ ನಂಬರ್ ಇಲ್ಲ.....

ಶ್ರೀ ಎ. ಲಕ್ಷ್ಮೀಸಾಗರ್.—ಸೀಲ್ ಇಲ್ಲ ಎಂದು ಹೇಳಿದರೆ.....

ಅಧ್ಯಕ್ಷರು.—ಮಿಟಿಂಗ್ ಕರೆಯುವುದಕ್ಕೆ ಡೈರೆಕ್ಷನ್ ಕೊಡುತ್ತೀರಿ ಅಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಆಯಿತು ಸ್ವಾಮಿ.

ರಾಣೆಬೆನ್ನೂರು ನಗರದಲ್ಲಿ ಓವರ್‌ಹೆಡ್ ಟ್ಯಾಂಕ್ ಕಟ್ಟಿಸುವ ಬಗ್ಗೆ

೧೬೭ (೧೯೧) ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಣೆಬೆನ್ನೂರು ನಗರದಲ್ಲಿ ಓವರ್ ಹೆಡ್ ಟ್ಯಾಂಕ್ ಕಟ್ಟಿಸುವ ಕೆಲಸ ಸ್ಥಗಿತಗೊಂಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಈ ಕೆಲಸವನ್ನು ಯಾವಾಗ ಪುನಹ ಪ್ರಾರಂಭಿಸಲಾಗುವುದು ?